
Read India
An Imprint of Pratham Books



# ಮರಳಿ ಮನೆಗೆ

ರುಕ್ಮಿಣಿ ಬ್ಯಾನರ್ಜಿ
ಜಯಶ್ರೀ ದೇಶಪಾಂಡೆ

Original Story *(English)* Going Home
by Rukmini Banerji
© Pratham Books 2004
Second Kannada Edition: 2009

Illustrations: Santosh Pujari and Ketan Raut
Kannada Translation: Jayashree Deshpande

ISBN: 81-8263-114-9

Registered Office:
PRATHAM BOOKS
633-634, 4th 'C' Main, 6th 'B' Cross,
OMBR Layout, Banaswadi, Bangalore 560 043
✆ 080-25429726 / 27 / 28

Regional Offices:
Mumbai ✆ 022-65162526,
New Delhi ✆ 011-65684113

Typesetting and Layout by: Trimiti Services

Printed by:

Published by PRATHAM BOOKS
www.prathambooks.org

The development of this book was sponsored by
Dubai Creek Round Table, Dubai, U.A.E.

Some rights reserved. This book is CC-BY-3.0 licensed.
Full terms of use and attribution available at:
http://www.prathambooks.org/cc



# ಮರಳಿ ಮನೆಗೆ

ಲೇಖಕರು
**ರುಕ್ಮಿಣಿ ಬ್ಯಾನರ್ಜಿ**

ಅನುವಾದ
**ಜಯಶ್ರೀ ದೇಶಪಾಂಡೆ**

ಶಾಲೆಯು ಬಿಡುವ ಸಮಯವೆಂದರೆ ತರಗತಿಗಳು

ಮುಗಿದು ಮನೆಗೆ ಹಿಂತಿರುಗುವ ಸಮಯ.

ಮಕ್ಕಳಿಗೆಲ್ಲ ಬಿಡುವಾಯಿತು. ಮನೆಗೆ ಹೋಗುವುದೆಂದರೆ ಎಲ್ಲರಿಗೂ ಖುಷಿ.

ಮಕ್ಕಳೆಲ್ಲ ಹೊರಟಿರುವವರು. ಶಿಕ್ಷಕರಿಗೂ ಅದು ಹೊರಡುವ ಸಮಯ.

ಎಲ್ಲರೂ ಮನೆಗೆ ಹಿಂತಿರುಗುತ್ತಿರುವರು.



ನಾನು ಶಾಲೆಯ ದೊಡ್ಡ ಬಾಗಿಲನ್ನು ದಾಟುವೆ .

ಬೇಗ ಬೇಗ ಹೊರಗೆ ನಡೆಯುವೆ .  ನನಗೆ ಅವಸರ ಆಗುತ್ತಿದೆ .

ಆದಷ್ಟು ಬೇಗ ಮನೆಯನ್ನು ಸೇರಬೇಕು .

ತಡವಾದರೆ ನನಗೆ ಆಟವಾಡಲು ಸಮಯ ಸಿಗಲಾರದು .

ಕತ್ತಲಾದರೆ ಆಟವಾಡಲು ಸಾಧ್ಯ ಆಗದು .

ಯಾರೊಂದಿಗೂ ಮಾತನಾಡಲು ಸಮಯ ದೊರಕದು .

ನಾನು ಬೇಗ ಬೇಗ ಮನೆಯನ್ನು ತಲುಪಬೇಕು .



ಶಾಲೆಯ ಹೊರಬಾಗಿಲು ದಾಟಿ ನಾನು ದಾರಿಗೆ ಬಂದೆ.

ಅದೊಂದು ಪುಟ್ಟದಾದ, ಅಗಲ ಕಿರಿದಾದ ದಾರಿ.

ಆ ಕಿರುದಾರಿಯ ಆಚೆ ಬದಿಯಲ್ಲಿ ಬೆಳಕು ಕಾಣಿಸುತ್ತಿದೆ.

ಪುಟ್ಟ ದಾರಿಯಲ್ಲಿ ಬೆಳಕಿಲ್ಲ.

ದೊಡ್ಡ ದಾರಿ ಆಚೆ ಬದಿಯಲ್ಲಿದೆ.  ಅಲ್ಲಿ ಬೆಳಕಿದೆ.



ದೊಡ್ಡ ದಾರಿಯ ತುಂಬೆಲ್ಲ ವಾಹನಗಳು ಓಡಾಡುತ್ತಿವೆ.

ಅಲ್ಲಿ ಬಹಳ ಜಾಗ ಇರುವುದರಿಂದ ಅನೇಕ ವಾಹನಗಳಿಗೆ ಚಲಿಸಲು ಸಾಧ್ಯ ಆಗುತ್ತದೆ.

ಅಲ್ಲಿ ಕಾರುಗಳು , ಲಾರಿಗಳು , ಬೈಸಿಕಲ್‌ಗಳು ಓಡಾಡುತ್ತವೆ.

ಮೋಟಾರು ಬೈಕುಗಳು , ಸ್ಕೂಟರ್‌ಗಳು , ಆಟೋರಿಕ್ಷಾಗಳೂ ಹೋಗುತ್ತಾ ಬರುತ್ತಾ ಇರುತ್ತವೆ .

ಕೆಲವು ವಾಹನಗಳು ಈ ಬದಿಯಿಂದ ಆ ಬದಿಗೆ ಹೋದರೆ ,

ಇನ್ನು ಕೆಲವು ಆ ಕಡೆಯಿಂದ ಈ ಕಡೆಗೆ ಓಡುತ್ತವೆ.

ಹೀಗೆ ವಾಹನಗಳು ಇರುವ ದಾರಿಯಲ್ಲಿ ನಾನು ಜಾಗ್ರತೆಯಿಂದ ಹೋಗಬೇಕು.

ಆದರೆ ಇಷ್ಟು ವಾಹನಗಳ ನಡುವೆ ದಾಟಿ ಹೋಗುವ ದಾರಿಯನ್ನು ನಾನು ಹುಡುಕಿ ಕೊಳ್ಳುವೆ.

ಹಾಗೆ ಕಂಡು ಕೊಳ್ಳುವುದು ಜಾಣೆಯಾದ ನನಗೆ ಸುಲಭ.

ವಾಹನಗಳನ್ನು ತಪ್ಪಿಸುತ್ತ ನಾನು ದಾರಿಯ ಆಚೆ ಬದಿಯನ್ನು ಸೇರಿಕೊಳ್ಳುವೆ.



ದಾರಿಯ ನಡುವೆ ಒಂದು ಉದ್ದವಾದ ಕಟ್ಟೆ ಇದೆ .

ಅದು ರಸ್ತೆಯನ್ನು ಎರಡು ಭಾಗವಾಗಿ ಮಾಡಿದೆ .

ಒಂದರಲ್ಲಿ ವಾಹನಗಳು ಈ ಕಡೆಯಿಂದ ಹೋಗುತ್ತವೆ .

ಇನ್ನೊಂದು ಭಾಗದಲ್ಲಿ ಆ ಕಡೆಯಿಂದ ಬರುತ್ತವೆ .

ನಾನು ಹೋಗಿ ಆ ಕಟ್ಟೆಯನ್ನು ಸೇರಿದೆ .

ನನ್ನ ಹಿಂದೆ ಹಾಗೂ ಮುಂದೆ ಅನೇಕ ವಾಹನಗಳು ಓಡಾಡುತ್ತಿವೆ .

ಇದನ್ನು ದಾಟುವಾಗ ನಾನು ಎಚ್ಚರಿಕೆಯಿಂದ ಸಾಗಬೇಕು .



ದಾರಿಯ ಆಚೆ ಬದಿಯನ್ನು ನಾನು ನಡೆದು ಹೋಗಿ ಸೇರಿದೆ.

ಅಲ್ಲಿ ಕಡಲೆಕಾಯಿ ಮಾರುತ್ತಾ ನಿಂತಿದ್ದ ಒಬ್ಬನಿಗೆ ನಾನು ಹೋಗಿ ಡಿಕ್ಕಿ ಹೊಡೆಯುವಳಿದ್ದೆ!

ಆದರೆ , ಅದನ್ನು ಕೊಂಚದರಲ್ಲಿ ತಪ್ಪಿಸಿಕೊಂಡೆ !

ಅವನು ಕೋಪದಿಂದ ನನ್ನನ್ನು ನೋಡಿ ಗದರಿಸಿದನು.

‘‘ತಪ್ಪಾಯಿತು ’’ ಎಂದು ಹೇಳಿ, ನಾನು ಅಲ್ಲಿಂದ ಓಡಿದೆ.



ಅಲ್ಲಿ ಸಾಲಿನಲ್ಲಿ ಇದ್ದ ಅನೇಕ ಅಂಗಡಿಗಳನ್ನು ನಾನು ದಾಟಿದೆ .

ಆ ಅಂಗಡಿಗಳೆಲ್ಲ ಜನರಿಂದ ತುಂಬಿದ್ದವು .

ಅವರೆಲ್ಲ ಬಗೆ ಬಗೆಯ ವಸ್ತುಗಳನ್ನು ಕೊಂಡು ಕೊಳ್ಳುತ್ತಿದ್ದರು .

ಅಗೋ , ಅಲ್ಲಿ ಬೊಂಬೆಗಳ ಅಂಗಡಿಯಿದೆ .  ಆದರೆ ನಾನು ಇಲ್ಲಿ ನಿಲ್ಲಲಾರೆ .

ಏಕೆಂದರೆ ನಾನು ಬೇಗ ಮನೆ ತಲುಪ ಬೇಕಿದೆ .



ನಾನು ಬೇಗಬೇಗನೆ ನಡೆಯುವೆ .  ನಿಧಾನವಾಗಿ ಹೋದರೆ ಆಗದು .

ದಾರಿಯ ಎರಡೂ ಕಡೆಗಳಲ್ಲಿ ಅನೇಕ ಅಂಗಡಿಗಳು ಇವೆ .

ಅಲ್ಲಿ ಮೀನು ಮಾರುವ ಕೆಲವು ಅಂಗಡಿಗಳೂ ಇವೆ .

ಅವುಗಳಲ್ಲಿ ನಾನಾ ಬಗೆಯ ಮೀನುಗಳನ್ನು ಮಾರಲು ಇಟ್ಟಿದ್ದಾರೆ .

ಉದ್ದಮೀನು , ದಪ್ಪಮೀನು , ಪುಟ್ಟಮೀನು , ಚಪ್ಪಟೆಮೀನು , ಫಳಫಳ ಹೊಳೆಯುವ ಮೀನು ,

ಬೂದು ಮೀನು , ಹೀಗೆ ನೂರಾರು ಮೀನುಗಳು ಅಲ್ಲಿವೆ .



ಮನೆ ತಲುಪಲು ನಾನೀಗ ಬೇಗ ಬೇಗ ಹೆಜ್ಜೆ ಹಾಕಿ ಓಡಬೇಕು .

ದಾರಿಯಲ್ಲಿ ಇರುವ ಈ ಎಲ್ಲಾ ಅಂಗಡಿಗಳನ್ನೂ ದಾಟಿ ಓಡಬೇಕು .

ಕ್ಷೌರಿಕನ ಅಂಗಡಿ , ಬಟ್ಟೆಯಂಗಡಿ , ಪಾನ್‌ಬೀಡಾದ ಅಂಗಡಿ ,

ಎಲ್ಲವನ್ನೂ ಹಿಂದೆ ಹಾಕಿ ನಾನು ಓಡಿದೆ.


CLOTH
SHOP
Video

ಅಬ್ಬಾ, ಕೊನೆಗೂ ಮನೆ ಬಂದಿತು !  ಓಡಿ ಓಡಿ ನಾನು ಮನೆ ಸೇರಿಯೇ ಬಿಟ್ಟೆ!!!

ನನಗೆ ತಡವಾಗಲೇ ಇಲ್ಲ .

ಅಪ್ಪನಿಗೆ ಮಧ್ಯಾಹ್ನ ಆಫೀಸು ಇರುತ್ತದೆ .

ಅವರು ಆಫೀಸಿಗೆ ಹೊರಡುವುದು ಇನ್ನು ಮೇಲೆಯೇ .

ಈಗ ಅವರಿನ್ನೂ ಹೋಗಿಲ್ಲ.

ಅವರ ಬೈಸಿಕಲ್ ನಮ್ಮ ಮನೆಯ ಹೊರಗೆ ಕಾಣಿಸುತ್ತಿದೆ .



ನನ್ನ ಅಪ್ಪ ಹೊರಗೆ ಬಂದರು .

ಅವರು ಆಫೀಸಿಗೆ ಹೊರಡಲು ಅಣಿಯಾಗಿದ್ದಾರೆ .

ಅಮ್ಮನೂ ಅವರ ಹಿಂದೆಯೇ ಬಂದಳು .

ನಾನು ಓಡಿ ಹೋಗಿ ಅಪ್ಪನನ್ನು ತಬ್ಬಿ ಕೊಂಡೆ .

ಅಪ್ಪನೂ ನನ್ನನ್ನು ಗಟ್ಟಿ ಯಾಗಿ ತಬ್ಬಿ ಕೊಂಡರು .

ನಮ್ಮಿಬ್ಬರಿಗೂ ಬಹು ಸಂತೋಷ ವಾಯಿತು .

ನಾನು ಬೇಗ ಮನೆ ಸೇರಿದ್ದನ್ನು ಕಂಡು ಅಮ್ಮನಿಗೂ ಖುಷಿ .

ಅಪ್ಪ ಈಗ ಆಫೀಸಿಗೆ ಹೊರಡು ವರು .



ಇನ್ನು ಅವಸರವೇನೂ ಇಲ್ಲ!  ಗಡಿಬಿಡಿಯೂ ಇಲ್ಲ.

ಅಪ್ಪ ನನ್ನನ್ನು ಕಂಡರು .  ನಾನೂ ಅವರನ್ನು ಕಂಡೆ .

ಇನ್ನು ನನಗೆ ತುಂಬಾ ಸಮಯವಿದೆ .

ಊಟಕ್ಕೆ , ಆಟಕ್ಕೆ ಎಲ್ಲದಕ್ಕೂ ಸಮಯವಿದೆ .

ನನಗೆ ಖುಷಿಯೋ ಖುಷಿ !!!



ಮಕ್ಕಳು ತಮ್ಮ ಅನುಭವವನ್ನು ಇತರರೊಂದಿಗೆ ಹಂಚಿಕೊಳ್ಳಲು ಬಯಸುತ್ತಾರೆ. ಮನೆಗೆ ಹೋಗುವುದು ಅಂತಹ ಅನುಭವಗಳು ಹೇಗೆ ಮಜಾ ಕೊಡುತ್ತವೆಂದು ತಿಳಿಸುತ್ತದೆ.

**ಈ ಮಾಲಿಕೆಯ ಇನ್ನೊಂದು ಪುಸ್ತಕ**

| | |
|---|---|
| ಪೇಟೆಗೆ ಹೋಗುವುದು | ಪುಸ್ತಕ ಕೊಳ್ಳಲು ಹೋದೆವು ನಾವು |
| ಗಾಳಿಯ ಪ್ರಭಾವ | ನನ್ನ ಬಾಲವಾಡಿ |

ಮೈನವಿರೇಳಿಸುವ ಇನ್ನು ಅನೇಕಾನೇಕ ಭಾರತೀಯ ಭಾಷಾ ಪುಸ್ತಕಗಳ ಮಾಹಿತಿಗಾಗಿ ಸಂಪರ್ಕಿಸಿ : www.prathambooks.org

ನಮ್ಮ ಪುಸ್ತಕಗಳು ಕನ್ನಡ, ಇಂಗ್ಲೀಷ್, ಹಿಂದಿ, ತೆಲಗು, ತಮಿಳು, ಮರಾಠಿ, ಗುಜರಾತಿ, ಬೆಂಗಾಲಿ, ಪಂಜಾಬಿ, ಉರ್ದು ಮತ್ತು ಒರಿಯಾ ಭಾಷೆಗಳಲ್ಲೂ ಲಭ್ಯ ಇವೆ.

PRATHAM BOOKS

ಅತ್ಯುತ್ತಮ ಗುಣಮಟ್ಟದ ಪುಸ್ತಕಗಳನ್ನು ಭಾರತೀಯ ಭಾಷೆಗಳಲ್ಲಿ, ಮಕ್ಕಳಿಗೆ ಎಟುಕುವ ಬೆಲೆಯಲ್ಲಿ ನೀಡುವ ಲಾಭರಹಿತ ಪ್ರಕಾಶನ ಸಂಸ್ಥೆ 'ಪ್ರಥಮ್ ಬುಕ್ಸ್'

Age Group : 3-6 years
(Kannada)
MRP Rs. 15.00

ISBN 81-8263-114-9